ಶ್ರೀ ಕೆ. ಬಿ. ಮಲ್ಲಪ್ಪ.—ಆ ೨೧೫ ಜನರು ಸುಮಾರು ೬-೭ ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಆದರೆ ತಾವು ಕಾಂಟ್ರಾಕ್ಟ್ ಬೇಸಿಸ್ ಮೇಲೆ ಕೆಲಸ ಮಾಡುತ್ತಿದ್ದಾರೆಂದು ಹೇಳುತ್ತಿದ್ದೀರಿ, ಅವರು ಆ ಬೇಸಿಸ್ ಮೇಲೆ ಕೆಲಸಕ್ಕೆ ಸೇರುವ ಮುನ್ನ ಏನಾದರೂ ಇಷ್ಟು ವರ್ಷ ಕೆಲಸ ಮಾಡಬೇಕು, ಇಷ್ಟು ವರ್ಷಕ್ಕೆ ತೆಗೆಯುತ್ತೇವೆಂದೇನಾದರೂ ಅಗ್ರಿಮೆಂಟ್ ಆಗಿದೆಯೆ ? ಹಾಗೆ ಆಗಿದ್ದರೆ, ಅದಕ್ಕೆ ಅವರು ಒಪ್ಪಿದ್ದಾರೆಯೇ ? ನನ್ನ (೧) ಪ್ರಶ್ನೆಗೆ ಉತ್ತರವಾಗಿ ದರ್ಜೆ ಹಾಗೂ ನೇಮಕಾತಿ ನಿಯಮಗಳ ಮೇರೆಗೆ ಕ್ರಮವಾಗಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದೀರಿ. ನೀವು ಈ ರೂಲ್ಸ್, ಪ್ರಕಾರ ಆರ್ಜಿಗಳನ್ನು ಕರೆದು ಬೇರೆಯವರನ್ನು ನೇಮಕ ಮಾಡಿಕೊಂಡರೆ ಇವರಿಗೆ ದೊರೆಯುವ ಉದ್ಯೋಗಾವಕಾಶಗಳನ್ನು ತಪ್ಪಿಸಿದಂತಾಗುವುದಿಲ್ಲವೆ ? ಇವರು ನಿರುದ್ಯೋಗಿಗಳಾಗುವುದಿಲ್ಲವೆ ?

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಸದಸ್ಯರಿಗೆ ನಾನು ಆಗಲೇ ಹೇಳಿದೆ. ಅವರು ನಮ್ಮ ಕರಾರಿಗೆ ಒಪ್ಪಿ ಪ್ರೈಕ್ಷಣಿಕ ವರ್ಷ ಮುಗಿಯುವವರೆಗೆ ಕೆಲಸ ಮಾಡುತ್ತೇವೆಂದು ಬಂದಿದ್ದಾರೆ. ಅವರನ್ನು ಖಾಯಂ ಮಾಡಬೇಕೆಂದೇನು ಇಲ್ಲ. ನೇಮಕಾತಿ ನಿಯಮದ ಪ್ರಕಾರ ಅವರೂ ಕೂಡ ಬೇರೆಯವರಂತೆ ಆಯ್ಕೆಯಾಗಬೇಕಾಗುತ್ತದೆ. ಆಗ ಅವರು ಖಾಯಂ ಹುದ್ದೆಗೆ ಅರ್ಹರಾಗುತ್ತಾರೆ.

ಶ್ರೀ ಕೆ. ಬಿ. ಮಲ್ಲಪ್ಪ.—ಅವರೂ ಕೂಡ ಎಲ್ಲರಂತೆ ಅರ್ಜಿಯನ್ನು ಹಾಕಿಕೊಳ್ಳಬೇಕೆಂದು ಹೇಳಿದಿರಿ. ಹಾಗೆ ಅರ್ಜಿಯನ್ನು ಸಲ್ಲಿಸಿದಾಗ, ಅವರು ಈ ಲಾಗಾಯ್ತು ಏನು ಒಂದೆರಡು ಮೂರು ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿದ್ದಾರೆ ಅದನ್ನು ಗಣನೆಗೆ ತೆಗೆದುಕೊಂಡು ಅವರಿಗೆ ಆದ್ಯತೆ ಕೊಡುತ್ತೀರಾ ?

ಶ್ರೀ ಜಿ. ಬಿ. ಶಂಕರ್‌ರಾವ್.—ಮಾನ್ಯ ಸದಸ್ಯರು ತಿಳಿದುಕೊಂಡಿರುವ ಹಾಗೆ ೬-೭ ವರ್ಷಗಳ ಕಾಲ ಏನು ಅವರು ಸೇವೆ ಸಲ್ಲಿಸಿಲ್ಲ, ಕೆಲವರು ೯ ತಿಂಗಳು ಮಾತ್ರ ಸೇವೆ ಸಲ್ಲಿಸಿದ್ದಾರೆ, ಮತ್ತೆ ಕೆಲವರು ೩-೪ ವರ್ಷ ಕೆಲಸ ಮಾಡಿದ್ದಾರೆ. ಅವರು ಕಾಂಟ್ರಾಕ್ಟ್ ಬೇಸಿಸ್ ಮೇಲೆ ಕೆಲಸ ಮಾಡಿರುವುದರಿಂದ ಎಲ್ಲರಂತೆ ಸಮಿತಿ ಮುಂದೆ ಬಂದು ಆಯ್ಕೆಯಾಗಬೇಕೇ ವಿನಹ ಆದ್ಯತೆ ಕೊಡುವ ಪ್ರಶ್ನೆ ಬರುವುದಿಲ್ಲ.

Reorganisation of Police force in the State

209. SRI P. RAMDEV (Malleswaram).—Will the Chief Minister be pleased to state.-

(a) what is the scheme of the Government to reorganise the police forces in Karnataka ;

(b) the report, based on which, the re-organisation is being made ;

(c) the reasons for creating the Post of Director General in the Police Department ?

SRI R. GUNDU RAO (Chief Minister).—

(a) The Government is considering to re-organise the Police Force in the State according to the necessity of the area of each district.

(b) The Government accords sanction after considering the report in depth received from the District Superintendent of Police and the Deputy Inspector General of Police of the concerned circle duly recommended by the Inspector General of Police, which is prepared on

the basis of the requirement of the area of the concerned district, public demand and public interest.

(c) With a view to ensure and facilitate that the Home Guards. Civil Defence and the Fire Brigade carry out their work effectively as also to control them the Post of Inspector General of Police and Director General of Home Guards and Fire Forces. is created in the police Department,

ಶ್ರೀ ಪಿ. ರಾಂದೇವ್.—ಸ್ವಾಮಿ, ರಾಜ್ಯದಲ್ಲಿ ಪೋಲೀಸ್ ಪಡೆಯನ್ನು ಪುನರ್ ಸಂಘಟನೆ ಮಾಡುವ ವಿಚಾರ ಸರ್ಕಾರದ ಗಮನದಲ್ಲಿದೆಯೆಂದು ಹೇಳಿದ್ದೀರಿ. ಎಷ್ಟು ಜಿಲ್ಲಾ ಘಟಕಗಳನ್ನು ಪುನರ್ ಸಂಘಟನೆ ಮಾಡಿದ್ದೀರಿ ? ಪುನರ್ ಸಂಘಟನೆ ಮಾಡಬೇಕಾದ ಜಿಲ್ಲಾ ಘಟಕಗಳು ಎಷ್ಟು ? ಯಾವ ರೀತಿ ನಿಯಮಗಳನ್ನು ಅನುಸರಿಸಿ ಪುನರ್ ಸಂಘಟನೆ ಮಾಡುತ್ತಿದ್ದೀರಿ ?

ಶ್ರೀ ಆರ್. ಗುಂಡೂರಾವ್.—ಶಿವಮೊಗ್ಗ, ಚಿತ್ರದುರ್ಗ, ತುಮಕೂರು, ಬೀದರ್, ಗುಲ್ಬರ್ಗಾ ಕೊಡಗು, ಹಾಸನ, ಮಂಡ್ಯ ಬಳ್ಳಾರಿ, ರಾಯಚೂರು ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮಾಡಿದ್ದೇವೆ. ಧಾರವಾಡ, ಬೆಳಗಾಂ, ಕೋಲಾರ ಹಾಗೂ ಇನ್ನಿತರ ಜಿಲ್ಲೆಗಳಲ್ಲಿ ಮಾಡ ಬೇಕಾಗಿದೆ.

ಶ್ರೀ ಪಿ. ರಾಂದೇವ್.—ಪುನರ್ ಸಂಘಟನೆ ಮಾಡುವಾಗ ಯಾವರೀತಿಯ ನೀತಿ ನಿಯಮವನ್ನು ಅನುಸರಿಸುತ್ತಿದ್ದೀರಿ ? ಗೋರೆ ಸಮಿತಿ, ಮಲ್ಲಿಕ್ ಸಮಿತಿ ವರದಿಯನ್ನಾಧರಿಸಿ ಮಾಡಿದ್ದೀರಾ ?

ಶ್ರೀ ಆರ್. ಗುಂಡೂರಾವ್.—ಅನೇಕ ವರದಿಗಳು ಇವೆ ಪ್ರತಿಯೊಂದು ಜಿಲ್ಲೆಗಳಲ್ಲಿ ಅಪರಾಧ ಗಳು ಎಷ್ಟಾಗುತ್ತವೆ, ಜನಸಂಖ್ಯೆ ಎಷ್ಟೆಷ್ಟು ಜಾಸ್ತಿಯಾಗುತ್ತದೆಂಬ ಬಗ್ಗೆ ಜಿಲ್ಲಾ ಪೋಲೀಸ್ ಸೂಪ ರಿಂಟೆಂಡೆಂಟ್‌ರವರಿಂದ ವರದಿ ತರಿಸಿಕೊಂಡು ಅವರ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಂಡು ಪುನರ್ ಸಂಘಟನೆ ಮಾಡಿದೆ.

ಶ್ರೀ ಪಿ. ರಾಂದೇವ್.—ಪೋಲೀಸ್ ಇಲಾಖೆಯಲ್ಲಿ ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ಹುದ್ದೆಯನ್ನು ಯಾವ ಆಧಾರದ ಮೇಲೆ ನಿರ್ಮಾಣ ಮಾಡಿದ್ದೀರಿ ? ಒಂದೇ ಒಂದು ಹುದ್ದೆಯನ್ನು ಏತಕ್ಕೆ ಮಾತ್ರ ಮಾಡಿದ್ದೀರಿ ? ಇದಕ್ಕೆ ವರದಿ ಹಿನ್ನೆಲೆ ಏನಾದರೂ ಇದೆಯೆ ?

ಶ್ರೀ ಆರ್. ಗುಂಡೂರಾವ್.—ನಮ್ಮ ನೆರೆ ರಾಜ್ಯಗಳಾದ ಆಂಧ್ರ ಮತ್ತು ತಮಿಳು ನಾಡು ಗಳಲ್ಲಿಯೂ ಈ ಹುದ್ದೆ ಇದೆ. ಹೋಂಗಾರ್ಡ್ಸ್ ಮತ್ತು ಫೈರ್ ಫೋರ್ಸ್‌ಗೆ ಸಂಬಂಧಪಟ್ಟಂತೆ ಈ ಹುದ್ದೆ ಇದೆ.

ಶ್ರೀ ಪಿ. ರಾಂದೇವ್.—ನೆರೆ ರಾಜ್ಯಗಳಲ್ಲಿರುವುದನ್ನು ನೋಡಿ ಮಾಡಿದ್ದೇವೆಂದು ಹೇಳಿದಿರಿ ಇತರೆ ಅಧಿಕಾರಿಗಳನ್ನು ಬೇರೆ ರಾಜ್ಯದಲ್ಲಿರುವ ಹಾಗೆ ಮಾಡಲಿಲ್ಲ. ಅದನ್ನು ಕೂಡ ಮಾಡುವುದಕ್ಕೆ ಸರ್ಕಾರ ಸಿದ್ಧ ವಿದೆಯೆ ?

ಶ್ರೀ ಆರ್. ಗುಂಡೂರಾವ್.—ಕೆಲವು ರಾಜ್ಯಗಳು ನಮ್ಮ ರಾಜ್ಯದ ರೂಲ್ಸ್ ಒಳ್ಳೆಯದಿದೆ ಎಂದು ಹೇಳುತ್ತವೆ. ನಾವು ಬೇರೆ ರಾಜ್ಯಗಳ ರೂಲ್ಸ್ ಮನಸ್ಸಿನಲ್ಲಿಟ್ಟುಕೊಂಡು ಮಾಡುತ್ತಿದ್ದೇವೆ.

ಶ್ರೀ ಪಿ. ರಾಂದೇವ್.—ಬೆಂಗಳೂರು ಕೈಗಾರಿಕಾ ನಗರ. ತಮ್ಮ ಪೋಲೀಸ್ ಪಡೆ ಕೈಗಾರಿಕಾ ಶಾಂತಿಯನ್ನು ಕಾಪಾಡುವುದಕ್ಕೆ, ಲಾ ಅಂಡ್ ಆರ್ಡರ್ ಮೆಂಟೇನ್ ಮಾಡುವುದಕ್ಕೆ ಸಾಕಾಗುತ್ತಿಲ್ಲ, ಆದ್ದರಿಂದ ಕೇಂದ್ರ ಸರ್ಕಾರದಲ್ಲಿರುವ ಹಾಗೆ ಸೆಂಟ್ರಲ್ ಇಂಡಸ್ಟ್ರಿಯಲ್ ಸೆಕ್ಯೂರಿಟಿ ಫೋರ್ಸ್ ಪಡೆಯ ಮಾದರಿಯಲ್ಲಿ ಒಂದು ಇಂಡಸ್ಟ್ರಿಯಲ್ ಸೆಕ್ಯೂರಿಟಿ ಫೋರ್ಸ್ ಪಡೆಯನ್ನು ತೆರೆಯುವುದಕ್ಕೆ ಸರ್ಕಾರ ತಯಾರಾಗಿದೆ ನಿ?

ಶ್ರೀ ಆರ್. ಗುಂಡೂರಾವ್.—ಈಗಾಗಲೇ ನಮ್ಮ ರಾಜ್ಯದ ಪೋಲೀಸ್ ಇಲಾಖೆಯ ಕೆಲವು ಅಧಿಕಾರಿಗಳನ್ನು ಇಂಡಸ್ಟ್ರಿಯಲ್ ಸೆಕ್ಯೂರಿಟಿ ಫೋರ್ಸ್‌ಗೆ ಕೊಟ್ಟಿದ್ದೇವೆ. ಕೈಗಾರಿಕೆಗಳಲ್ಲಿ ಅಪರಾಧ ಗಳು ಯಾವ ಪ್ರಮಾಣದಲ್ಲಿ ನಡೆಯುತ್ತಿವೆ ಎಂಬುದನ್ನು ಮನಗಂಡು ಸರ್ಕಾರ ಅದನ್ನು ಹಂತಹಂತವಾಗಿ ಮಾಡುತ್ತಿದೆ. ಇನ್ನೂ ಇನ್ನಷ್ಟು ಹೊತ್ತಿಗೆ ಈ ಕೆಲಸ ಪೂರ್ತಿಯಾಗುತ್ತದೆ.